"Soonya Simhasana Prabhava"

323. Sri G. DUGGAPPA (Bharamsagar).—

Will the Chief Minister be pleased to state :—

(*a*) whether a Reader in Sanskrit, University of Mysore, has published a book "Soonya Simhasana Prabhava"

(*b*) whether it has come to the notice of the Government that it contains certain objectionable matters which tend to create ill-will and hatred among certain section of the society in the State ;

(*c*) whether the Government has received petitions from different sections of the society in the State stating that this book has created ill-will and wounded the feelings of certain sect in the society ;

(*d*) if so, the action Government intend to take in the matter ?

Sri N. M. KOTRABASAIAH SOGI (Deputy Minister for Education) [On behalf of SRI VEERENDRA PAIL (Chief Minister)].—

(*a*) A book entitled "Soonya Peetada Prabhava" has been published by a Reader in Sanskrit, University of Mysore.

(*b*) This is being examined.

(*c*) Yes.

(*d*) This is being examined.

ಶ್ರೀ ಜಿ. ದುಗ್ಗಪ್ಪ.— ಅನೇಕ ಮನವಿಗಳು ಬಂದಿವೆ ಎಂದು ಹೇಳಿದ್ದೀರಿ. ಈ ಪುಸ್ತಕದಲ್ಲಿ ಅನೇಕ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡುವ ಪರಿಸ್ಥಿತಿಯುಂಟಾಗಿ ಅನೇಕ ಗೊಂದಲಗಳಿಗೆ ಕಾರಣವಾಗಿದೆ. ಇದಕ್ಕೆ ಕೂಡಲೇ ಸರಕಾರ ಮುಟ್ಟುಗೋಲು ಹಾಕಬೇಕು ಎಂದು ಮನವಿಗಳು ಬಂದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ.—ಇದರ ಬಗ್ಗೆ ಮನವಿಗಳು ಬಂದಿವೆ ಎಂದು ಉತ್ತರದಲ್ಲಿ ಹೇಳಲಾಗಿದೆ. ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಶೂನ್ಯ ಸಿಂಹಾಸನ ಪ್ರಭಾವ ಎನ್ನುವ ಪುಸ್ತಕ ಇಲ್ಲಿ ಈಗ ನನ್ನಲ್ಲಿದೆ. ಇದರಲ್ಲಿರುವ ಪುಟ 96ರಲ್ಲಿ ಹೀಗಿದೆ :

> "ಜಂಗಮರ ರಕ್ತಕ್ಕೆ ಹುಟ್ಟಿದ ವ್ಯಕ್ತಿಗಳಿಂದಲೇ ಲೋಕ ಕಲ್ಯಾಣವು ಶಾಶ್ವತವಾಗಿ ನಡದೀತೇ ಹೊರತು ಭಕ್ತಮನೆತನದವರಿಂದ ಹಾಗೆ ನಡೆಯಲಾರದೆಂಬುದಕ್ಕೆ ಇಂದಿನ ಪ್ರಚಲಿತವಾದ ಸಿರಿಗೆರೆ, ಸುತ್ತೂರು, ಸಿದ್ಧಗಂಗೆ ಮಠಗಳ ಸ್ವಾಮಿಗಳ ಚಲನವಲನಗಳೇ ಪ್ರತ್ಯಕ್ಷ ನಿದರ್ಶವಾಗಿವೆ"

ಇತ್ಯಾದಿ, ಇತ್ಯಾದಿ, ಇದರಲ್ಲಿ ಹೀಗೆ ಗುರುತರವಾದ ಆಕ್ಷೇಪಣೆಗಳು ಬಂದಿವೆ. ಇದಕ್ಕಿಂತಲೂ ಹೆಚ್ಚಿನ ಪುರಾವೆಗಳು ಬೇಕೇ ?

ಶ್ರೀ ಎನ್. ಎಂ. ಕೊಟ್ರಬಸವಯ್ಯ ಸೋಗಿ.—ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.